**ಸಾಕ್ಷಿಯನ್ನು ದಿನಾಂಕಃ 27.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ.ಬಿ.ಎಸ್.ಎಸ್. ವಕೀಲರಿಂದಃ**

ನಾನು ಎಂ.ಸಿ. ಮಂಜುನಾಥರವರು ದಿನಾಂಕಃ 20.01.2023 ರಂದು ಮೃತರಾಗಿರುವುದಾಗಿ ಹಾಗು ಆ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ದಾವಾ ಪತ್ರದ ಕಂಡಿಕೆ-2 ರಲ್ಲಿ ತಿಳಿಸಿದ್ದು ಆ ರೀತಿಯ ಯಾವುದೇ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ಮರಣ ಪ್ರಮಾಣ ಪತ್ರದಲ್ಲಿ ಎಂ.ಸಿ. ಮಂಜುನಾಥರವರ ತಾಯಿಯ ಹೆಸರು ಕಮಲಮ್ಮ ಎಂದು ಹಾಗು ತಂದೆಯ ಹೆಸರು ಚೂಡಯ್ಯ ಎಂದು ನಮೂದಾಗಿರುತ್ತದೆ. ಅದರಲ್ಲಿ ಅವರ ಹೆಂಡತಿ ಹೆಸರು ದೇವೀರಮ್ಮ ಎಂದು ನಮೂದಾಗಿರುತ್ತದೆ. ಸದರಿ ಮರಣ ಪ್ರಮಾಣ ಪತ್ರವನ್ನು ಹೆಚ್.ಡಿ. ಕೋಟೆಯ ಪುರಸಭೆಯಲ್ಲಿ ಪಡೆದುಕೊಂಡಿರುತ್ತೇನೆ. ಯಾವುದೇ ಜನನ-ಮರಣ ನೋಂದಣಾಧಿಕಾರಿಗಳು ಒಬ್ಬ ಮೃತ ವ್ಯಕ್ತಿಯ ಹೆಸರಿಗೆ ಎರಡು ಹೆಂಡತಿಯ ಹೆಸರುಗಳಲ್ಲಿ ಮರಣ ಪ್ರಮಾಣ ಪತ್ರ ನೀಡುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ಮಂಜುನಾಥ ಎಂ.ಸಿ. ರವರ ಮರಣ ಪ್ರಮಾಣ ಪತ್ರವಾಗಿದ್ದು ಅದರಲ್ಲಿ ಹೆಂಡತಿಯ ಹೆಸರು ದೇವಾಜಮ್ಮ ಬಿ.ಡಿ. ಎಂದು ನಮೂದಾಗಿರುತ್ತದೆಂದು ಕೇಳಲಾಗಿ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು 1

ಮತ್ತು 3 ನೇ ಪ್ರತಿವಾದಿಗಳ ಪರ **ನಿ.ಡಿ.-1** ಎಂದು ಗುರುತಿಸಲಾಯಿತು. ಎಂ.ಸಿ. ಮಂಜುನಾಥರವರು ತೀರಿಕೊಂಡ 12 ದಿನಗಳಿಗೆ ಅವರ ಶ್ರಾದ್ಧಾ ಕರ್ಮ ಮಾಡಿರುತ್ತೇನೆ. ಸದರಿ ಕಾರ್ಯವನ್ನು 1 ನೇ ಪ್ರತಿವಾದಿಯು ದಿನಾಂಕಃ 31.01.2023 ರಂದು ಮಾಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ 01 ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ಕಾಣುವ ಫೋಟೋ ಎಂ.ಸಿ. ಮಂಜುನಾಥರವರದಾಗಿರುತ್ತದೆಂದರೆ ಸರಿ. ಸದರಿ ದಾಖಲೆ ಎಂ.ಸಿ. ಮಂಜುನಾಥರವರ ಉತ್ತರ ಕ್ರಿಯೆಯ ಆಹ್ವಾನ ಪತ್ರಿಕೆಯಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು 1 ಮತ್ತು 3 ನೇ ಪ್ರತಿವಾದಿಗಳ ಪರ **ನಿ.ಡಿ.-2** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಾನು ನನ್ನ ಗಂಡನಾದ ಎಂ.ಸಿ. ಮಂಜುನಾಥರವರ ಉತ್ತರ ಕ್ರಿಯೆಯನ್ನು ಮಾಡಿಸಿದ್ದು ಆದರೆ ಆಹ್ವಾನ ಪತ್ರಿಕೆ ಮಾಡಿಸಿರುವುದಿಲ್ಲವೆಂದು ನುಡಿಯುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಗಂಡ ಸತ್ತಾಗ ಅವರ ಜೊತೆ ಹೆಂಡತಿಯನ್ನು ಕೂರಿಸಿ ಕುಂಕುಮ ನೀಡಿ ಸೋಗಲು ಹಾಕುತ್ತಾರೆಂದರೆ ಸಾಕ್ಷಿ ಕೆಲವು ಕಡೆ ಹಾಕುತ್ತಾರೆ ಮತ್ತೆ ಕೆಲವು ಕಡೆ ಹಾಕುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಸದರಿ ಫೋಟೋದಲ್ಲಿರುವ ವ್ಯಕ್ತಿ ಎಂ.ಸಿ. ಮಂಜುನಾಥ ಆಗಿದ್ದು ಅವರು ಮೃತರಾದ ನಂತರ ಮನೆಯಲ್ಲಿ ಮಲಗಿಸಿರುವ ಫೋಟೋ ಅಲ್ಲವೇ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಸದರಿ ಫೋಟೋವನ್ನು ಒಪ್ಪಿಕೊಂಡ ಮೇರೆಗೆ ಅದನ್ನು 1 ಮತ್ತು 3 ನೇ ಪ್ರತಿವಾದಿಗಳ ಪರ **ನಿ.ಡಿ.-3** ಎಂದು ಗುರುತಿಸಲಾಯಿತು. ನನ್ನ ವಾದ

ಪತ್ರದ ಕಂಡಿಕೆ-2 ರಲ್ಲಿ ತಿಳಿಸಿರುವ ಬಿಲ್ ನಂ. 3108 ರ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಗುರುತಿಸಿಕೊಂಡ ದಾಖಲೆಯನ್ನು ತೋರಿಸಿ ಅವುಗಳಲ್ಲಿ ಯಾವ ದಾಖಲೆ ಎಂದು ಕೇಳಲಾಗಿ ಸಾಕ್ಷಿಯು ನಾನು ಗುರುತಿಸಿಕೊಂಡ ದಾಖಲೆಗಳಲ್ಲಿ ಅದು ಕಾಣುತ್ತಿಲ್ಲ ಮನೆಯಲ್ಲಿ ಇರಬಹುದು ಅದನ್ನು ಮುಂದಿನ ದಿನಗಳಲ್ಲಿ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ನನ್ನ ವಾದ ಪತ್ರದ ಕಂಡಿಕೆ-5 ರಲ್ಲಿ 1 ನೇ ಪ್ರತಿವಾದಿಯು ನನ್ನ ಗಂಡ ಎಂ.ಸಿ. ಮಂಜುನಾಥರವರ ಜೊತೆ ಅಕ್ರಮ ಸಂಬಂಧ ಹೊಂದಿರುವುದಾಗಿ ತಿಳಿಸಿದ್ದು ಬೇರೆಯವರು ನೋಡಿ ಹೇಳಿದ ಮೇರೆಗೆ ಗೊತ್ತಾಗಿರುತ್ತದೆ. ನನ್ನ ದಾವಾ ಪತ್ರದ ಶಿರೋನಾಮೆಯಲ್ಲಿ 1 ನೇ ಪ್ರತಿವಾದಿಯ ಗಂಡನ ಹೆಸರನ್ನು ಎಂ.ಸಿ. ಮಂಜುನಾಥ ಎಂದು ನಮೂದಿಸಿರುತ್ತೇನೆಂದರೆ ಸರಿ. ನಾನು ಈ ದಾವೆಯಲ್ಲಿ ಕೇಳಿದ ಪರಿಹಾರವನ್ನು ಕೇಳುವ ಮೊದಲು ಯಾವ ದಾಖಲೆಗಳನ್ನು ಹಾಜರುಪಡಿಸಬೇಕೆನ್ನುವುದನ್ನು ತಿಳಿದುಕೊಂಡಿರುತ್ತೇನೆ ಹಾಗು ಅವುಗಳನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ.

**ಈ ಹಂತದಲ್ಲಿ 1 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**